**ಓ.ಎಸ್. ನಂ. 74/2020** **ಪಿ.ಡಬ್ಲ್ಯೂ- 2**

**<u>ಸಾಕ್ಷಿಯನ್ನು ದಿನಾಂಕ 18.8.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ವಕೀಲರು ಗೈರುಹಾಜರಾಗಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು

<u>ಪಾಟೀ ಸವಾಲುಃ 4 ರಿಂದ 6, 9 ರಿಂದ 11 ನೇ ಪ್ರತಿವಾದಿ ಪರ ಶ್ರೀ ಡಿ.ಆರ್.ಎಂ ವಕೀಲರಿಂದಃ</u>

ನನಗೆ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ಸಮನ್ಸ ಬಂದಿರುವುದಿಲ್ಲ. ನನಗೆ ಈ ದಿನ ಸಾಕ್ಷಿ ನುಡಿಯಲು ವಾದಿಯರು ಕರೆದುಕೊಂಡು ಬಂದಿರುತ್ತಾರೆ. ನನಗೆ ತಿರುಮಲೇಗೌಡರಿಗೆ ಯಾವ ಸರ್ವೆ ನಂಬರಿನಲ್ಲಿ ಎಷ್ಟು ಆಸ್ತಿ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ತಿರುಮಲೇಗೌಡರಿಗೆ ಯಾವ ಆಸ್ತಿ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. 3 ನೇ ವಾದಿ ಜಿ.ಬಿ.ಸರಗೂರಿನಲ್ಲಿ, 1 ಮತ್ತು 2 ನೇ ವಾದಿಯರು ಕಲ್ಲಹಳ್ಳಿಯಲ್ಲಿ ಮತ್ತು 4 ನೇ ವಾದಿ ಪಡುವಾರಹಳ್ಳಿಯಲ್ಲಿ ವಾಸವಾಗಿರುತ್ತಾರೆ. ತಿರುಮಲೇಗೌಡರ ಮಕ್ಕಳಾದ 1 ರಿಂದ 3 ನೇ ಪ್ರತಿವಾದಿಯರು ಜಿ.ಬಿ.ಸರಗೂರಿನಲ್ಲಿ ವಾಸವಾಗಿರುತ್ತಾರೆ ಎಂದರೆ ಸಾಕ್ಷಿದಾರರು ಒಂದೇ ಮನೆಯಲ್ಲಿ ಮಧ್ಯೆ ವಿಭಾಗ ಮಾಡಿಕೊಂಡು 2 ಮತ್ತು 3 ನೇ ಪ್ರತಿವಾದಿಯರು ವಾಸವಾಗಿರುತ್ತಾರೆ ಎನ್ನುವರು. 1 ನೇ ಪ್ರತಿವಾದಿಯು 2 ಮತ್ತು 3 ನೇ ಪ್ರತಿವಾದಿಯರ ಮನೆಯಲ್ಲಿ ಊಟ ಮಾಡಿಕೊಂಡು ಯಾರಾದರೂ ಒಬ್ಬರ ಮನೆಯಲ್ಲಿ ಮಲಗುತ್ತಾರೆ. ದಾವಆಸ್ತಿಯ ಸರ್ವೆ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ನನಗೆ ಕಟ್ಟೆಹುಂಡಿ ಗ್ರಾಮದ ಸರ್ವೆ ನಂ.27 ರಲ್ಲಿ ಎರಡುವರೆ ಎಕರೆ ಜಮೀನು ಇರುತ್ತದೆ. ಸದರಿ ಜಮೀನು ದಾವಆಸ್ತಿಯ ಯಾವ ಜಮೀನಿನ ಪಕ್ಕ ಬರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿದಾರರು ಮುಂದುವರಿದು ರಸ್ತೆ ಒಂದು ಬದಿ ನನ್ನ ಜಮೀನು ಇರುತ್ತದೆ, ಇನ್ನೊಂದು ಬದಿ ದಾವಆಸ್ತಿ ಇರುತ್ತದೆ ಎನ್ನುವರು. ನನಗೆ ಸಂಬಂಧಪಟ್ಟಂತೆ ಕಟ್ಟೆಹುಂಡಿಯಲ್ಲಿ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಕಟ್ಟೆಹುಂಡಿ ಗ್ರಾಮದ ಜಮೀನನ್ನು ಗೋವಿಂದೇಗೌಡರಿಗೆ ಮಾರಾಟ ಮಾಡಿ 10 ವರ್ಷವಾಗಿರುತ್ತದೆ. ತಿರುಮಲೇಗೌಡರ ಜಮೀನು ಪಕ್ಕದಲ್ಲಿ ಈಗ ನನಗೆ ಯಾವುದೇ ಆಸ್ತಿ ಇರುವುದಿಲ್ಲ. ತಿರುಮಲೇಗೌಡರು ಅವರ ಮಕ್ಕಳಿಗೆ ಜಮೀನನ್ನು ವಿಭಾಗ ಮಾಡಿ ಬರವಣಿಗೆ ಮಾಡಿದಾಗ ನಾನು ಹಾಜರಿರಲಿಲ್ಲ. ತಿರುಮಲೇಗೌಡರು 1 ನೇ ಪ್ರತಿವಾದಿಯನ್ನು ಮದುವೆಯಾಗಿರುತ್ತಾರೆ. 2 ಮತ್ತು 3 ನೇ ಪ್ರತಿವಾದಿಯರು 1 ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ. ವಾದಿಯರು ತಿರುಮಲೇಗೌಡರ ಮಕ್ಕಳು ಎಂದು ಹೇಳುವ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ನೋಡಿರುವುದಿಲ್ಲ. ವಾದಿಯರು ತಿರುಮಲೇಗೌಡರ ಮಕ್ಕಳು ಎಂದು ನ್ಯಾಯಾಲಯದಲ್ಲಿ ಹೇಳಬೇಕೆಂದು ಹೇಳಿದ್ದರಿಂದ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ನಾನು ಹಲವಾರು ವರ್ಷಗಳಿಂದ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬರುತ್ತಿದ್ದೇನೆ ಎಂದರೆ ಸರಿ. ನನಗೆ ಸಾಕ್ಷಿ ನುಡಿಯುವ ಅಭ್ಯಾಸ ಇರುವುದರಿಂದ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.